ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 1297/2018

ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-5

| | |
|---|---|
| ಸಾಕ್ಷಿಯ ಹೆಸರು | ಃ ಆನಂದ ಬಿಂಜವಾಡಗಿ |
| ತಂದೆಯ ಹೆಸರು | ಃ ಮಂಗಳಪ್ಪ |
| ವಯಸ್ಸು | ಃ 46 ವರ್ಷ |
| ಉದ್ಯೋಗ | ಃ ಪೋಲಿಸ ಪೇದೆ |
| ವಾಸಸ್ಥಳ | ಃ ಗುಳೇದಗುಡ್ಡ |

ದಿನಾಂಕಃ 14-10-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

2012 ರಿಂದ 2018 ವರೆಗೆ ನಾನು ಅಮೀನಗಡ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಅಂತಾ ಕರ್ತವ್ಯನಿರ್ವಹಿಸಿರುತ್ತೇನೆ.

ದಿ. 25-02-2017 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಉಪನಾಳ ಎಸ್.ಸಿ. ಗ್ರಾಮದಲ್ಲಿ ಹಳ್ಳದಲ್ಲಿ ಅನದೀಕೃತವಾಗಿ ಉಸಕನ್ನು ತುಂಬುತ್ತಿದ್ದಾರೆಂದು ಬಾತ್ಮಿ ಬಂದಿರುತ್ತದೆ ಎಂದು ನಮಗೆ ತಿಳಿಸಿ ನನಗೆ ಪಂಚರನ್ನು ಕರೆತರಲು ಹೇಳಿರುತ್ತಾರೆ. ಅದರಂತೆ ಚಾಸಾ-2 ಮತ್ತು 3 ರವರನ್ನು ಕರೆತಂದು ಚಾಸಾ-1 ರವರ ಮುಂದೆ ಹಾಜರಪಡಿಸಿರುತ್ತೇನೆ. ಚಾಸಾ-2 ಮತ್ತು 3 ರವರಿಗೆ ಚಾಸಾ-1 ರವರು ಬಾತ್ಮಿ ವಿಷಯ ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ನಂತರ ನಾನು, ಚಾಸಾ-1, 2,3 ಮತ್ತು ಚಾಸಾ-7 ರವರು ಕೂಡಿ ಸರಕಾರಿ ವಾಹನ ಸಂ.ಕೆಎ-29/ಜಿ-158 ನೇದ್ದರಲ್ಲಿ ಕುಳಿತುಕೊಂಡು ಠಾಣೆಯಿಂದ 12.15 ಕ್ಕೆ ಹೊರಟು ಉಪನಾಳ ಹಳ್ಳದ ಸಮೀಪ ಸ್ವಲ್ಪ ದೂರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಕಾಲನಡಿಗೆಯಿಂದ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ 4 ಜನ ಉಸಕನ್ನು ಟ್ರ್ಯಾಕ್ಟರನಲ್ಲಿ ತುಂಬುತ್ತಿರುವುದು ಕಂಡು ಬಂದಿತ್ತು. ಅಲ್ಲಿ ಹೋಗಿ ಟ್ರ್ಯಾಕ್ಟರಗಳನ್ನು ನಿಲ್ಲಿಸಿ ಅವುಗಳನ್ನು ತಪಾಸಣೆ ಮಾಡಲಾಗಿ ಅವರ ಹತ್ತಿರ ಉಸುಕು ತುಂಬಲು ಯಾವುದೇ ಪರವಾಣಿಗೆಯನ್ನು ಪಡೆದುಕೊಂಡಿರುವುದಿಲ್ಲ. 4 ಜನರಲ್ಲಿ 3 ಜನ ಓಡಿ ಹೋದರು. 1 ನೇ ಆರೋಪಿಯಿಂದ ಟ್ರ್ಯಾಕ್ಟರ ಚಾವಿಯನ್ನು ಇಸಿದುಕೊಂಡು ನನ್ನ ತಾಬಾಕ್ಕೆ ತೆಗೆದುಕೊಂಡಿರುತ್ತೇನೆ. 1 ನೇ ಆರೋಪಿತನು ಟ್ರ್ಯಾಕ್ಟರ ಚಾವಿಯನ್ನು ಕೊಡು ಎಂದು ನನ್ನ ಸಮವಸ್ತ್ರವನ್ನು ಜಗ್ಗಿ ಎಳೆದಾಡಿ ನನ್ನ ಕಿಸೆಯಲ್ಲಿನ ಚಾವಿಯನ್ನು ಕಸಿದುಕೊಂಡು ಕರ್ತವ್ಯಕ್ಕೆ ಅಡ್ಡಿಪಡಿಸಿ ಟ್ರ್ಯಾಕ್ಟರ ಸಂ.ಕೆಎ-29/ಟಿಎ 8318 ನೇದ್ದನ್ನು ಹಾಗು

ಗ್ಲಾಮರ ಬೈಕನ್ನು ಬಿಟ್ಟು ಸ್ಥಳದಿಂದ ಪರಾರಿಯಾದರು. ನಂತರ ಚಾಸಾ-1 ನಾವು ಹಾಗು ಪಂಚರು ಸೇರಿ ಸ್ಥಳದಲ್ಲಿ ದಿ: 25-02-2017 ರಂದು 1.45 ರಿಂದ 2.45 ಗಂಟೆವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ 2 ಕೆ.ಜಿ. ಮರಳನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದು ಸೀಲ ಹಾಕಿ ಸಹಿ ಮಾಡಿರುತ್ತೇವೆ. ಸದರಿ ಟ್ರ್ಯಾಕ್ಟರ ಸಂ.ಕೆಎ-29/ಟಿಎ 8318 ನೇದ್ದನ್ನು ಹಾಗು ಗ್ಲಾಮರ ಬೈಕನ್ನು ಚಾಸಾ-1 ರವರು ಜಪ್ತುಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಬಂದು ಚಾಸಾ-1 ರವರು ಫಿರ್ಯಾದಿಯನ್ನು ದಾಖಲಿಸಿರುತ್ತಾರೆ. ಸಂಜೆ 5.00 ಗಂಟೆ ಸುಮಾರಿಗೆ ಚಾಸಾ-4 ಮತ್ತು 5 ರವರ ಸಮಕ್ಷಮ ನನ್ನ ಸಮವಸ್ತ್ರವನ್ನು ಚಾಸಾ-13 ರವರು ಜಪ್ತಿಪಡಿಸಿಕೊಂಡು ಪಂಚರ ಸಹಿ ಮಾಡಿ ಸೀಲ ಹಾಕಿರುತ್ತೇವೆ. ಈ ಕುರಿತು ನನ್ನ ಹೇಳಿಕೆಯನ್ನು ಚಾಸಾ-13 ರವರ ಮುಂದೆ ನೀಡಿರುತ್ತೇನೆ. ದಿ: 26-02-2017 ರಂದು ನಾನು ತೋರಿಸಿದ ಗುನ್ಹೆ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-13 ರವರು ಮುಂಜಾನೆ 9.00 ರಿಂದ 10.00 ಗಂಟೆ ವರೆಗೆ ಗುನ್ಹೆ ಸ್ಥಳ ಪಂಚನಾಮೆ ಜರುಗಿಸಿ ಆ ಕಾಲಕ್ಕೆ ಎರಡು ಛಾಯಾಚಿತ್ರಗಳನ್ನು ಸೆರೆಹಿಡಿದಿರುತ್ತಾರೆ. ದಿ: 23-03-2017 ರಂದು ಆರೋಪಿತರು ಜಾಮೀನು ತೆಗೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ಆರೋಪಿತರನ್ನು ನೋಡಿ ಗುರುತಿಸಿ ಅವರ ಹೆಸರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಕೃತ್ಯಕ್ಕೆ ಉಪಯೋಗಿಸಿದ ಟ್ರ್ಯಾಕ್ಟರಕ್ಕೆ ಜೋಡಿಸಿದ ಟ್ರೇಲರ ಸಂಖ್ಯೆ ಹಾಗು ದ್ವಿಚಕ್ರ ವಾಹನ ಸಂಖ್ಯೆ 1005 ನೇದ್ದವುಗಳನ್ನು ದಿ: 23-03-2017 ರಂದು ಚಾಸಾ-13 ರವರ ಮುಂದೆ ಪುನ: ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ಹಲ್ಲೆ ಮಾಡಿ ನನ್ನ ಜೇಬನ್ನು ಹರಿದು ಕರ್ತವ್ಯಕ್ಕೆ ಅಡ್ಡಿಪಡಿಸಿದ ನನ್ನ ಸಮವಸ್ತ್ರವನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ತನ್ನ ಸಮವಸ್ತ್ರವನ್ನು ನೋಡಿ ಗುರುತಿಸಿದ್ದು ಆರೋಪಿತರ ಪರ ವಕೀಲರು ತಕರಾರು ಎತ್ತಿರುತ್ತಾರೆ ಸದರಿ ಸಮವಸ್ತ್ರವನ್ನು ತಕರಾರಿಗೊಳಪಡಿಸಿ ಎಮ್.ಓ-2 ಎಂದು ಗುರುತಿಸಲಾಯಿತು. ಗುನ್ಹೆ ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಎರಡು ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ರೇಡ ಕಾಲಕ್ಕೆ ಶ್ಯಾಂಪಲಗಾಗಿ ತೆಗೆದ ಮರಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಶ್ಯಾಂಪಲಗಾಗಿ ತೆಗೆದ ಮರಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಮ್.ಓ-1 ಎಂದು ಗುರುತಿಸಲಾಗಿರುತ್ತದೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2 ರಿಂದ 4 ನೇ ಆರೋಪಿತರು ಈ ದಿನ ನ್ಯಾಯಾಲಯದ ಮುಂದ ಗೈರ ಹಾಜರಿದ್ದು ಅವರ ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ತಕರಾರು ಮಾಡಿರುವುದಿಲ್ಲ.

<u>ಪಾಟೀಸವಾಲುಃ **1** ರಿಂದ **4** ನೇ</u> ಆರೋಪಿತರ ಪರ ಶ್ರೀ. ಬಿ.ಎನ್.ಎಮ್. ವಕೀಲರಿಂದ:

ಘಟನೆ ಆದಾಗ ಅಮೀನಗಡದಲ್ಲಿ ನಾನು ಮೂರು ವರಿ ವರ್ಷ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಅಮೀನಗಡ ಠಾಣಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರಿಂದ ಅಮೀನಗಡ ಠಾಣಾ ವ್ಯಾಪ್ತಿಯಲ್ಲಿ ಬರತಕ್ಕಂತ ಹಳ್ಳಿಗಳು ಎಷ್ಟು ಅಂತರದಲ್ಲಿ ಇವೆ ಎಂದು ನನಗೆ ಮಾಹಿತಿ ಇರುತ್ತದೆ. ನಾವು ಅಮೀನಗಡ ಠಾಣೆಯಿಂದ ಗುನ್ಹೆ ಸ್ಥಳಕ್ಕೆ ಕೆಲೂರ, ಬೆನಕನವಾರಿ, ಉಪನಾಳ ಮಾರ್ಗವಾಗಿ ಹೋಗಿರುತ್ತೇವೆ. ಮೇಲಾದಿಕಾರಗಳು ನನಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿದಾಗ 12.00 ಗಂಟೆ ಆಗಿತ್ತು. ಅಮೀನಗಡದಲ್ಲಿ ಔಟ ಪೋಲಿಸ ಸ್ಟೇಷನ ಅಂತಾ ಗುಡೂರ ಗ್ರಾಮದಲ್ಲಿ ಇದೆ. ಸದರಿ ಔಟ ಪೋಲಿಸ ಸ್ಟೇಷನಗೆ ಎ.ಎಸ್.ಐ. ಹಾಗು ಹವಾಲ್ದಾರ ಮತ್ತು ಪೋಲಿಸರು ನೇಮಕವಾಗಿರುತ್ತಾರೆಂದರೆ ಸರಿ. ಘಟನೆ ನಡೆದಾಗ ಸದರಿ ಔಟ ಪೋಲಿಸ ಸ್ಟೇಷನಲ್ಲಿ ಯಾರು ಕರ್ತವ್ಯದಲ್ಲಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಔಟ ಪೋಲಿಸ ಸ್ಟೇಷನ ವ್ಯಾಪ್ತಿಯಲ್ಲಿ ಉಪನಾಳ ಎಸ್.ಸಿ. ಗ್ರಾಮ ಬರುತ್ತದೆ ಎಂದರೆ ಸರಿ. ಸದರಿ ಉಪನಾಳ ಎಸ್.ಸಿ. ಗ್ರಾಮದಲ್ಲಿ ಯಾವುದೇ ಘಟನೆಗಳು ಗಟಿಸಿದಾಗ ಔಟ ಪೋಲಿಸ ಸ್ಟೇಷನಗೆ ಮಾಹಿತಿ ಬಂದು ನಂತರ ಅಮೀನಗಡ ಪೋಲಿಸ ಠಾಣೆಗೆ ಮಾಹಿತಿ ಬರುತ್ತದೆ ಎಂದರೆ ಸಾಕ್ಷಿ ನನ್ನ ಮೇಲಾದಿಕಾರಿಗಳಿಗೆ ಗೊತ್ತಿರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಔಟ ಪೋಲಿಸ ಸ್ಟೇಷನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಸದರಿ ಠಾಣಾ ವ್ಯಾಪ್ತಿಯಲ್ಲಿ ಆಗುವ ಘಟನೆಗಳಲ್ಲಿ ಭಾಗಿಯಾಗುತ್ತಾರೆಂದರೆ ಸರಿಯಲ್ಲ. ನಾನು ಪಂಚರನ್ನು ಕರೆತರಲು ನಡೆದುಕೊಂಡು ಹೋಗಿರುತ್ತೇನೆ. ಚಾಸಾ-1 ರವರು ನನಗೆ 12.00 ಗಂಟೆಗೆ ಪಂಚರನ್ನು ಕರೆತರಲು ತಿಳಿಸಿರುತ್ತಾರೆ ನಂತರ 5 ನಿಮಿಷದಲ್ಲಿ ಪಂಚರನ್ನು ಕರೆತಂದು ಅವರ ಮುಂದೆ ಹಾಜರಪಡಿಸಿರುತ್ತೆನೆ. ಪಂಚರು ಯಾವ ಗ್ರಾಮದವರು ಮತ್ತು ಉದ್ಯೋಗ ಮಾಡುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಪಂಚರ ಹೆಸರುಗಳನ್ನು ಹೇಳಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಪಂಚರನ್ನು ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರನ್ನು ಗುನ್ಹೆ ಸ್ಥಳಕ್ಕೆ ಸರಕಾರಿ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ನಾವು ಗುನ್ಹೆ ಸ್ಥಳಕ್ಕೆ ಹೋದಾಗ ಸಮಯ 12.45 ಗಂಟೆ ಆಗಿತ್ತು. ನಾವು ಗುನ್ಹೆ ಸ್ಥಳದಿಂದ ಸ್ವಲ್ಪ ಸಮೀಪದಲ್ಲಿ ಮರೆಯಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದ್ದೇವು. ಗುನ್ಹೆ ಸ್ಥಳದಿಂದ ಅಂದಾಜು 5 ರಿಂದ 10 ಮೀಟರ ಅಂತರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ. ನಾವು ವಾಹನವನ್ನು ನಿಲ್ಲಿಸಿ 5 ನಿಮಿಷ ಆರೋಪಿತರನ್ನು ನಿಗಾವಣೆ ಮಾಡಿ ಗುನ್ಹೆ ಸ್ಥಳಕ್ಕೆ ಹೋಗಿರುತ್ತೇವೆ. ಆರೋಪಿತರು ಟ್ರ್ಯಾಕ್ಟರನ್ನು ಯಾವ ದಿಕ್ಕಿಗೆ ನಿಲ್ಲಿಸಿ ಮರಳು ತುಂಬುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾವು ಗುನ್ಹೆ ಸ್ಥಳಕ್ಕೆ ಹೋಗಿರುವುದಿಲ್ಲ ಆರೋಪಿತರು ಯಾವುದೇ

ಅಕ್ರಮವಾಗಿ ಮರಳನ್ನು ಟ್ರ್ಯಾಕ್ಟರನಲ್ಲಿ ತುಂಬುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಟ್ರ್ಯಾಕ್ಟರನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಆರೋಪಿತರ ಸಮಕ್ಷಮ ಟ್ರ್ಯಾಕ್ಟರ ಚಾವಿಯನ್ನು ತೆಗೆದುಕೊಂಡಿರುತ್ತೇನೆ. ನಿಂತ ಟ್ರ್ಯಾಕ್ಟರ ಚಾವಿಯನ್ನು ತೆಗೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ನಿಂತ ಟ್ರ್ಯಾಕ್ಟರ ಚಾವಿಯನ್ನು ತೆಗೆದುಕೊಂಡು ನನ್ನ ಜೇಬಿನಲ್ಲಿ ಹಾಕಿಕೊಂಡಾಗ ಆರೋಪಿತರು ನನ್ನ ಎಳೆದಾಡಿ ಜೇಬಿನಿಂದ ಚಾವಿಯನ್ನು ಕಸಿದುಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಜೇಬಿನಲ್ಲಿದ್ದ ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುತ್ತಾನೆ. ಆ ಸಮಯದಲ್ಲಿ ನನ್ನಮೇಲಾದಿಕಾರಿಗಳು ನನ್ನ ಹಿಂದೆ ಇದ್ದರು. ನಮ್ಮ ಮೇಲಾದಿಕಾರಿಗಳು ಹಾಗು ನಮ್ಮ ಸಿಬ್ಬಂದಿ ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿರುತ್ತಾರೆ. ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ನನ್ನ ಜೇಬಿನಲ್ಲಿದ್ದ ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜಪ್ತುಪಡಿಸಿಕೊಂಡು ಟ್ರ್ಯಾಕ್ಟರ ಬಣ್ಣ ಹಾಗು ಯಾವ ಕಂಪನಿಯದು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮೇಲಾದಿಕಾರಿಗಳ ಮಾತು ಕೇಳಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಸಮವಸ್ತ್ರ ನನ್ನದು ಅಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಗುನ್ಹೆ ಸ್ಥಳಕ್ಕೆ ಹೋಗಿಲ್ಲ ಪಂಚನಾಮೆಯಲ್ಲಿ ಬಾಗಿಯಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.